# ಲಿವ್ ಇನ್ ರಿಲೇಶನ್‌ಶಿಪ್ ಸುಗಂಧಾ ಮನದಲ್ಲಿ ದ್ವಂದ್ವ




■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

'ನಾನಿಲ್ಲಿಗೆ ಕೂರೋದಕ್ಕೆ ಬಂದಿಲ್ಲ, ಈ ಚೆಕ್ಕನ್ನು ನಿನ್ನ ಮುಖಕ್ಕೆ ಎಸೆಯಲು ಬಂದಿದ್ದೇನೆ', ರಿತಿಕ್ ಅದೇ ಒರಟುತನದಲ್ಲಿ ಹೇಳಿದ.

'ನನಗೆ ಪೂರಾ ಏಳು ಲಕ್ಷ ರೂಪಾಯಿಗಳು ಬೇಕು, ಅದೂ ಒಂದೇ ಕಂತಿನಲ್ಲಿ', ನಾನು ಸಹ ರೇಗಿದೆ. ರಿತಿಕ್ ಸಹ ಗಡಿಯನ್ನು ದಾಟುತ್ತಿದ್ದ. ನಾನು ನನ್ನ ಹಣವನ್ನು ಕೇಳಿದರೆ, ಇದರಲ್ಲಿ ನನ್ನನ್ನು ನಿಂದಿಸುವ ಔಚಿತ್ಯವೇನು? ಮೊದಲು ಸದಾಶಿವನನ್ನು ನನ್ನ 'ಗೆಳೆಯ' ಎಂದ, ನಂತರ ನನ್ನ ಮುಖದ ಮೇಲೆ ಚೆಕ್ ಎಸೆದಿದ್ದ, ಇದು ನನ್ನ ತಾಳ್ಮೆಯನ್ನು ಕೆದಕಿತ್ತು.

'ನೀನು ಹೀಗೇ ಹೇಳ್ತೀಯ ಅಂತ ನನಗೆ ಗೊತ್ತಿತ್ತು, ನೀನು ಹಣಕ್ಕಾಗಿ ಬಾಲವಾಡಿಸುವ ಮೃಗ, ನೀನು ಹಣಕ್ಕಾಗಿ ಯಾರೊಂದಿಗಾದರೂ...'

'ಸ್ಟಾಪ್ ನೌ! ಹೋಲ್ಡ್ ಯುವರ್ ಟಂಗ್! ಇನ್ನು ನೀನು ಮತ್ತೆ ನನ್ನನ್ನು ಬೈಯ್ದರೆ, ನಾನು ಪೊಲೀಸರನ್ನು ಕರೆಸ್ತೀನಿ! ನನ್ನ ಆಫೀಸಿನಲ್ಲಿ ಹೀಗೆ ಬೆದರಿಸುವ ತಪ್ಪು ಮಾಡ್ಬೇಡ,' ನಾನು ಸಹ ಗರ್ಜಿಸಿದೆ.

ಕಚೇರಿಯ ಸಿಬ್ಬಂದಿಗೆ ಆಶ್ಚರ್ಯವಾಗಿತ್ತು. ಅವರು ಈ ಹಿಂದೆ ಹೀಗೆ ನಾನು ಕಿರುಚುವುದನ್ನು ಎಂದೂ ನೋಡಿರಲಿಲ್ಲ ಕೇಳಿರಲಿಲ್ಲ. ಅವರು ಮಧ್ಯ ಪ್ರವೇಶಿಸುವುದೋ, ಬೇಡವೋ ಎಂಬ ದ್ವಂದ್ವಕ್ಕೀಡಾಗಿದ್ದರು.

'ನಾನು ಈ ಚೆಕ್ಕನ್ನು ಇಟ್ಟುಕೊಳ್ತೇನೆ, ಉಳಿದ ಆರು ಲಕ್ಷ ರೂಪಾಯಿಗಳು ಒಂದು ವಾರದೊಳಗೆ ನನಗೆ ಸಿಗದಿದ್ದರೆ, ನಾನು ಪೊಲೀಸ್ ಕಂಪ್ಲೇಟ್ ಕೊಡ್ತೀನಿ, ತಿಳೀತಾ?'

ನಾನು ರಿತಿಕ್‌ಗೆ ಎಚ್ಚರಿಕೆಯನ್ನು ಕೊಟ್ಟೆ. ಈಗ ರಿತಿಕ್ ಬದಲಾಗಿದ್ದರೆ, ನಾನು ಸಹ ಬದಲಾಗಿದ್ದೆ. ನಾನೀಗ ರೋದಿಸುವ ಅಥವಾ ಚಿಂತೆಗೊಳಗಾಗುವ ಸುಗಂಧಾ ಆಗಿರಲಿಲ್ಲ. ಮೊದಲು ಋಷಭನನ್ನು ಕಾರಿನಿಂದ ಇಳಿಸಿದ್ದೆ; ನಂತರ ವಿಶಾಲನೊಂದಿಗೆ ಚರ್ಚೆಗಳ ನಡುವೆ, ಮಹಿಳೆಯರ ಪರ ಮಾತಾಡಿ ನನ್ನಲ್ಲಿ ನಾನು ಅಪಾರ ಆತ್ಮವಿಶ್ವಾಸವನ್ನು ಮನಗಾಣಲಾರಂಭಿಸಿದ್ದೆ.

ರಿತಿಕ್‌ನ ಬಗ್ಗೆಗಿದ್ದ ಕೋಮಲ ಭಾವನೆ, ಕೀರ್ತಿಗೆ ಅನುಮತಿ ಕೊಟ್ಟ ನಂತರ, ಆ ಬಗ್ಗೆ ನನಗೆ ಸ್ವಲ್ಪ ಪಶ್ಚಾತ್ತಾಪ ಕಾಡಿತ್ತು; ಈಗ ಅದನ್ನೆಲ್ಲಾ ರಿತಿಕ್ ತುಳಿದಿದ್ದ. ಈಗ ಅವನು ನನ್ನ ಹೆಣ್ತನವನ್ನು ಅವಮಾನಿಸುವ ವ್ಯಕ್ತಿಯಾಗಿದ್ದ.

'ನಾನು ಇಷ್ಟು ಬೇಗ ಪೂರಾ ಹಣವನ್ನು ಕೊಡಲಾರೆ', ರಿತಿಕ್ ಬುಸುಗುಟ್ಟಿದ.

'ಏಕೆ ಕೊಡಲಾರೆ? ಮನೆಯನ್ನು ಮಾರು ಅಥವಾ ನಿನ್ನ ಹೆಂಡ್ತಿಯಿಂದ ಸಾಲ ತಗೋ, ಏನಾದ್ರು ಮಾಡು. ನೀನು ಹಣವನ್ನು ಹೇಗೆ ಹಿಂದಿರುಗಿಸಬೇಕು ಎಂಬುದು ನಿನ್ನ ಯೋಚನೆಗೆ ಬಿಟ್ಟಿದ್ದು, ನನ್ನದಲ್ಲ. ನನಗೆ ವಾರದೊಳಗೆ ನನ್ನ ಪೂರ್ಣ ಹಣ ವಾಪಸ್ ಬೇಕು. ಮಿಸ್ಟರ್ ಶರ್ಮಾ, ನಿಮಗೆ ನನ್ನ ಮಾತು ಅರ್ಥವಾಗಿದ್ದರೆ, ನೀವು ದಯವಿಟ್ಟು ಇಲ್ಲಿಂದ ಹೋಗಿ. ಇಲ್ಲಿ ನಿಂತು ವ್ಯರ್ಥವಾಗಿ ಚರ್ಚಿಸಿ ನಿಮ್ಮ ಸಮಯವನ್ನು ಹಾಳು ಮಾಡಿಕೊಳ್ಳಬೇಡಿ, ನನ್ನ ಸಮಯವನ್ನೂ ಹಾಳು ಮಾಡಬೇಡಿ. ಸೋ ಯೂ ಶುಡ್ ಗೋ ನೌ'

ನಾನು ತುಂಬಾ ಕಟುವಾಗಿ ಹೇಳಿದೆ. ರಿತಿಕ್ ಅಲ್ಲಿ ಒಂದೆರಡು ನಿಮಿಷ ನಿಂತಿದ್ದು, ನಂತರ ಅಲ್ಲಿಂದ ಮೌನವಾಗಿ ಹೊರಟು ಹೋದ.

